**ಕಾನೂನು ಮತ್ತು ನ್ಯಾಯ ಮಂತ್ರಾಲಯ**

**(ವಿಧಾಯೀ ಇಲಾಖೆ)**

ನವದೆಹಲಿ, 19ನೇ ಆಗಸ್ಟ್, 2021/ಶ್ರಾವಣ 28, 1943 (ಶಕ)

ಸಂಸತ್ತಿನಲ್ಲಿ ಕೆಳಕಂಡ ಅಧಿನಿಯಮಕ್ಕೆ 2021 ಆಗಸ್ಟ್ 18ರಂದು ರಾಷ್ಟ್ರಪತಿಯವರ ಸಮ್ಮತಿ ದೊರಕಿದೆ ಮತ್ತು ಅದನ್ನು ಈ ಮೂಲಕ ಸಾಮಾನ್ಯ ಮಾಹಿತಿಗಾಗಿ ಪ್ರಕಟಿಸಲಾಗಿದೆ:–

**ಸಂವಿಧಾನ (ನೂರ ಐದನೇ ತಿದ್ದುಪಡಿ) ಅಧಿನಿಯಮ, 2021**

[18ನೇ ಆಗಸ್ಟ್, 2021.]

ಭಾರತ ಸಂವಿಧಾನಕ್ಕೆ ಮತ್ತಷ್ಟು ತಿದ್ದುಪಡಿ ಮಾಡುವ ಅಧಿನಿಯಮ.

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:–

**1. ಚಿಕ್ಕ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಸಂವಿಧಾನ (ನೂರ ಐದನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು ಕೇಂದ್ರ ಸರ್ಕಾರವು, ಭಾರತ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಅನುಚ್ಛೇದ 338ಬಿ ನ ತಿದ್ದುಪಡಿ.–** ಸಂವಿಧಾನದ 338ಬಿ ನ ಅನುಚ್ಛೇದದಲ್ಲಿ ಖಂಡ (9)ರಲ್ಲಿ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:–

"ಮತ್ತು ಪರಂತು, ಈ ನಿಯಮದಲ್ಲಿ ಇರುವುದು ಯಾವುದೂ ಅನುಚ್ಛೇದ 342ಎ ಖಂಡ (3) ಉದ್ದೇಶಗಳಿಗಾಗಿ ಅನ್ವಯವಾಗತಕ್ಕದ್ದಲ್ಲ."

**3. ಅನುಚ್ಛೇದ 342ಎ ತಿದ್ದುಪಡಿ.–** ಸಂವಿಧಾನದ 342ಎ ಅನುಚ್ಛೇದದಲ್ಲಿ,–

(ಎ) ಖಂಡ (1)ರಲ್ಲಿ "ಈ ಸಂವಿಧಾನದ ಉದ್ದೇಶಕ್ಕಾಗಿ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು" ಪದಗಳಿಗೆ, "ಕೇಂದ್ರ ಸರ್ಕಾರದ ಉದ್ದೇಶಕ್ಕಾಗಿ, ಕೇಂದ್ರ ಪಟ್ಟಿಯಲ್ಲಿರುವ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳು" ಎಂಬ ಪದಗಳನ್ನು ಪ್ರತ್ಯಾಯೋಜಿಸತಕ್ಕದ್ದು;

(ಬಿ) ಖಂಡ (2)ನೇ ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:–

'ವಿವರಣೆ.– ಖಂಡ (1) ಮತ್ತು (2) ಉದ್ದೇಶಗಳಿಗಾಗಿ "ಕೇಂದ್ರ ಪಟ್ಟಿ" ಎಂದರೆ ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ವರ್ಗಗಳು ಮತ್ತು ಕೇಂದ್ರ ಸರ್ಕಾರದ ಮೂಲಕ ಸಿದ್ಧಪಡಿಸಲಾದ ಮತ್ತು ನಿರ್ವಹಿಸಲಾದ ಲಿಖಿತ ರೂಪದಲ್ಲಿ ಪಟ್ಟಿ.

(3) ಖಂಡ (1) ಮತ್ತು (2)ರಲ್ಲಿ ಏನೇ ಒಳಗೊಂಡಿದ್ದಾಗ್ಯೂ ಪ್ರತಿಯೊಂದು ರಾಜ್ಯವು ಅಥವಾ ಕೇಂದ್ರಾಡಳಿತ ಪ್ರದೇಶವು, ಕಾನೂನಿನ ಮೂಲಕ, ತನ್ನದೇ ಉದ್ದೇಶಗಳಿಗಾಗಿ, ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಯನ್ನು ಸಿದ್ಧಪಡಿಸಬಹುದು ಮತ್ತು ನಿರ್ವಹಿಸಬಹುದು, ಅದರಲ್ಲಿರುವ ನಮೂದುಗಳು ಕೇಂದ್ರ ಪಟ್ಟಿಯಲ್ಲಿರುವವುಗಳಿಗಿಂತ ಭಿನ್ನವಾಗಿರಬಹುದು.'

**4. ಅನುಚ್ಛೇದ 366 ರ ತಿದ್ದುಪಡಿ.**– ಸಂವಿಧಾನದ 366ನೇ ಅನುಚ್ಛೇದದಲ್ಲಿ, (26ಸಿ) ಖಂಡಕ್ಕಾಗಿ ಈ ಮುಂದಿನ ಖಂಡವನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

'(26ಸಿ) "ಸಾಮಾಜಿಕ ಮತ್ತು ಶೈಕ್ಷಣಿಕ ಹಿಂದುಳಿದ ವರ್ಗಗಳು" ಎಂದರೆ, ಸಂದರ್ಭಾನುಸಾರ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಕೇಂದ್ರಾಡಳಿತ ಪ್ರದೇಶದ ಉದ್ದೇಶಗಳಿಗಾಗಿ 342ಎ ಅನುಚ್ಛೇದದ ಮೇರೆಗೆ ಹಾಗೆ ಭಾವಿಸಲಾದ ಹಿಂದುಳಿದ ವರ್ಗಗಳು.'

---------

ಅನೂಪ್ ಕುಮಾರ್ ಮೆಂಡಿರಟ್ಟ
ಭಾರತ ಸರ್ಕಾರದ ಕಾರ್ಯದರ್ಶಿ